## ೨೮. ತೂಗುವೆ ರಂಗನ

ತೂಗುವೆ ರಂಗನ ತೂಗುವೆ ಕೃಷ್ಣನ
ತೂಗಿ ಜೋ ಜೋ ಹಾಡುವೆ ತೂಗಿ ಜೋ ಜೋ ಹಾಡುವೆ ॥ಪ॥

ಮೇಲುಕೋಟೆ ಸ್ವಾಮಿ ಚೆಲುವರಾಯನ
ಬೇಲೂರ ಶ್ರೀ ಚೆನ್ನ ಕೇಶವನ
ಉಡುಪಿಯಲಿ ನಿಂತಿರುವ ಶ್ರೀ ಕೃಷ್ಣನ
ಶ್ರೀರಂಗಧಾಮದಿ ಮಲಗಿದವನ ।ತೂಗುವೆ। ॥೧॥

ಕಣ್ಣಲ್ಲೇ ಹುಣ್ಣಿಮೆ ತಂದವನಾ
ನಗುವಲ್ಲೇ ಮಲ್ಲಿಗೆಯ ನಾಚಿಸುವನಾ
ಚೆಲುವಲ್ಲೇ ತಾವರೆಯ ಮೀರಿಸುವನಾ
ಈ ಮನೆಯ ಬೆಳಕಾಗಿ ಬಂದವನಾ ।ತೂಗುವೆ। ॥೨॥

ಆಲದೆಲೆಯ ಮೇಲೆ ಮಲಗಿದವನಾ
ಹತ್ತಾವತಾರದ ಪರಮಾತ್ಮನಾ
ಮತ್ತೆ ನಮಗಾಗಿಳೆಗೆ ಬಂದವನಾ
ಜಗವೆಲ್ಲಾ ತೂಗುವ ಜಗದೀಶನಾ ।ತೂಗುವೆ। ॥೩॥